**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ಪಾಟೀಲ್ ಆರ್.ಆರ್, ಅಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ) ಖಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 163 ಇಎನ್‌ಕ್ಯೂ 2016, ದಿನಾಂಕ: 04.01.2017.
2. ಅಪರ ನಿಬಂಧಕರು, ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-1/ DE/35/2017/ARE-9, ದಿನಾಂಕ: 10.02.2021.
3. ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-1/ DE/35/2017/ARE-9, ದಿನಾಂಕ: 20.02.2021.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 60 ಗ್ರಾಪಂಕಾ 2021, ದಿ: 08.06.2021.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ಉತ್ತರ ದಿನಾಂಕ:12.07.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಪಾಟೀಲ್ ಆರ್.ಆರ್, ಅಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ) ಖಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಈ ಕೆಳಕಂಡ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾಗಿತ್ತು.

**" ದೋಷಾರೋಪಣೆ":-**

1. Instead of forming CC Road from Government Hospital upto Subhash Chowka and development and protection work near Maruthi Mandira, CC road from the house of Sankaje upto Hanabaragalli has been formed and compound for patil Chanichani graveyard near Maruthi Mandira has been constructed and no estimate has been prepared for the alternative works executed.
2. In the work executed near bus stop road, MNDHS Lakshmi temple no plants are found at the time of inspection, though an amount of Rs. 41,990 + 39,525= Rs. 81,515/- has been spent for plantation.
3. There is considerable difference in the works executed and measurements recorded in the M.B in respect of formation of canal from Manachavadi road to Shiragave Guruji house and the Difference is Rs.78,454/- in formation of lake canal from the house of Shiragave Guruji to Shekhavaya lake and the difference is Rs. 88,304/- and in formation of Nayaka kodi road and the difference is Rs.40,968/- therefore you DGO's and the president Sri. Rakesh Mahadeva Chinchole are equally responsible for the loss caused to the extent of Rs.2,89,241.

Thus, you DGOs 1 and 2 being Government / public Servants have failed to manintain absolute integrity besides devotion to duty and acted in amanner unbecoming of Government servants and thus committed misconduct as enumerated U/R 3(1) of Karnataka civil sevice (conduct) Rules1966.

ಮೇಲೆ ಓದಲಾದ ಕ್ರಮ ಸಂಖ್ಯೆ (2) ಮತ್ತು (3) ರಲ್ಲಿ ಆಪಾದಿತ ಸರ್ಕಾರಿ ನೌಕರ–1 ಶ್ರೀ ಪಾಟೀಲ್ ಆರ್.ಆರ್, ಅಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ) ಖಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ದದ ಆರೋಪವು ಸಾಬೀತಾಗಿದೆಯೆಂದು ಮತ್ತು ಆಪಾದಿತ ಸರ್ಕಾರಿ ನೌಕರ–2 ಶ್ರೀ ಎಂ.ಜಿ ಕುಂಬಾರ್, ಅಂದಿನ ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತ್ ಚಿಕ್ಕೋಡಿ ಇವರ ವಿರುದ್ಧದ ಆರೋಪವು ಸಾಬೀತಾಗಿಲ್ಲವೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರು ಅಂಗೀಕರಿಸಿ, ಶ್ರೀ ಪಾಟೀಲ್ ಆರ್.ಆರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಖಡಕಲಾಟ ಗ್ರಾಮ ಪಂಚಾಯತ್ ಇವರು ದಿನಾಂಕ: 30.06.2015 ರಂದು ನಿವೃತ್ತಿ ಹೊಂದಿದ್ದು, ಇವರ ವಿರುದ್ದ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ " ಇವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ಮತ್ತು ಇವರಿಗೆ ಪಾವತಿಸುವ ಪಿಂಚಣಿಯಲ್ಲಿ ರೂ. 1,10,001/– ಗಳನ್ನು ವಸೂಲಿ ಮಾಡುವ ದಂಡನೆ " ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಪಾಟೀಲ್ ಆರ್.ಆರ್, ಅಂದಿನ ಕಾರ್ಯದರ್ಶಿ (ಹಾಲಿ ನಿವೃತ್ತ) ಖಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ 2ನೇ ಕಾರಣ ಕೇಳುವ ನೋಟೀಸಿಗೆ ಆಪಾದಿತ ನೌಕರರು ಸಮಾಜಾಯಿಷಿಯನ್ನು ಸಲ್ಲಿಸಿದ್ದು, ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆಯನ್ನು ಮತ್ತು ಲೋಕಾಯುಕ್ತ ವಿಚಾರಣಾ ವರದಿಯನ್ನು ಪರಿಶೀಲಿಸಿದಾಗ ಆಪಾದಿತರು ವಿಚಾರಣಾ ಸಮಯದಲ್ಲಿ ನೀಡಿರುವ ಹೇಳಿಕೆಯನ್ನೇ ಪುನರಾವರ್ತಿಸಿರುವುದು ಕಂಡು ಬಂದಿರುತ್ತದೆ ಮತ್ತು ಅವರ ಹೇಳಿಕೆಯಲ್ಲಿ ಅವರನ್ನು ದೋಷಮುಕ್ತಗೊಳಿಸಲು ಪರಿಗಣಿಸಬಹುದಾದಂತಹ ಯಾವುದೇ ಪೂರಕ ಅಂಶ, ದಾಖಲೆಗಳು ಕಂಡು ಬರುವುದಿಲ್ಲ.

ಈ ಪ್ರಕರಣದ ಬಗ್ಗೆ ಅಪರ ನಿಬಂಧಕರು ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತರವರು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರ ವಿರುದ್ದ ಆರೋಪವು ಸಾಬೀತಾಗಿರುವುದಕ್ಕೆ ಸಂಬಂಧಿಸಿದಂತೆ ವಿವರವಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ಮಾನ್ಯ ಉಪ ಲೋಕಾಯುಕ್ತರವರ ವಿಚಾರಣೆಯಲ್ಲಿಯೂ ಕೂಡ ಎದುರುದಾರರು ತಮ್ಮ ಮೇಲಿನ ಆರೋಪಗಳಲ್ಲಿ ಯಾವುದೇ ಹುರುಳಿಲ್ಲವೆಂದು ಸಮರ್ಥಿಸಿಕೊಳ್ಳಲು ವಿಫಲರಾಗಿರುತ್ತಾರೆ ಹಾಗೂ ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರು ವಿಚಾರಣಾ ವರದಿಯನ್ನು ಅಂಗೀಕರಿಸಿ, ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಪಾಟೀಲ್ ಆರ್.ಆರ್, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಖಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ " ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ಮತ್ತು ಇವರಿಗೆ ಪಾವತಿಸುವ ಪಿಂಚಣಿಯಲ್ಲಿ ರೂ. 1,10,001/– ಗಳನ್ನು ವಸೂಲಿ ಮಾಡುವ ದಂಡನೆ " ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ, ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸನ್ನು ಪರಿಶೀಲಿಸಿ, ಶ್ರೀ ಪಾಟೀಲ್ ಆರ್.ಆರ್, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಖಿಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಮಾನ್ಯ ಉಪಲೋಕಾಯುಕ್ತರವರು ಶಿಫಾರಸ್ಸು ಮಾಡಿರುವಂತೆ " ಇವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ಮತ್ತು ಇವರಿಗೆ ಪಾವತಿಸುವ ಪಿಂಚಣಿಯಲ್ಲಿ ರೂ. 1,10,001/- ಗಳನ್ನು ವಸೂಲಿ ಮಾಡುವ ದಂಡನೆ " ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 60 ಗ್ರಾಪಂಕಾ 2021, ಬೆಂಗಳೂರು, ದಿನಾಂಕ:-07.02.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಪಾಟೀಲ್ ಆರ್.ಆರ್, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಖಿಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ನಿಯಮ 214(1)(ಬಿ) ರನ್ವಯ " ಇವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ಶೇಕಡ 10% ರಷ್ಟನ್ನು 5 (ಐದು) ವರ್ಷಗಳವರೆಗೆ ತಡೆ ಹಿಡಿಯುವ ಮತ್ತು ಇವರಿಗೆ ಪಾವತಿಸುವ ಪಿಂಚಣಿಯಲ್ಲಿ ರೂ. 1,10,001/- ಗಳನ್ನು ವಸೂಲಿ ಮಾಡುವ ದಂಡನೆ " (For imposing penalty of withholding 10% of pension payable to DGO Sri Patil R.R for a period of 5 Years, apart from recovering a sum of Rs. 1,10,001/- from the pension payable to DGO-1 Sri Patil R.R ) ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

7/2/22
*(ಚೇತನ.ಎಂ)*
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು-9, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಳಗಾವಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿಕ್ಕೋಡಿ, ಬೆಳಗಾವಿ ಜಿಲ್ಲೆ.
   ಶ್ರೀ ಪಾಟೀಲ್ ಆರ್.ಆರ್, (ನಿವೃತ್ತ ಕಾರ್ಯದರ್ಶಿ) ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಖಿಡಕಲಾಟ ಗ್ರಾಮ ಪಂಚಾಯತ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ (**ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಇವರ ಮುಖಾಂತರ**)
6. ಗಣಕ ಕೋಶ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ/ಪ್ರತಿ.